"ಸ್ವಲ್ಪ ಚಹಾ ತರಿಸುತ್ತೇನೆ," ಎಂದು ಎದುರಿನ ಹೋಟೆಲ್ಲಿಂದ ಚಹಾ ತರಿಸಿಕೊಟ್ಟ.

ಕರೆಂಟು ಬಾರದಿದ್ದರಿಂದ ಸ್ವಲ್ಪ ಸಮಯದ ಬಳಿಕ ಅವರಿಬ್ಬರೂ ಅವನ ರೂಮಿನತ್ತ ಹೊರಟರು.

★★★

"ನಿಮ್ಮ ಹೆಸರು?"

"ಕೇಶವ ಜೋಯಿಸ, ಕೆರೆಗದ್ದೆ. ನಿಮ್ಮದು?"

"ವಿದ್ಯಾತೀರ್ಥದಯಾನಂದಭಾಸ್ಕರ."

"ಅದೇನು ಅಷ್ಟೊಂದು ಹೆಸರು?"

"ವಿದ್ಯಾತೀರ್ಥರು ನಮ್ಮ ಕುಲಗುರುಗಳು, ದಯಾನಂದಸರಸ್ವತೀಯವರೆಂದರೆ ಅಮ್ಮನಿಗೆ ಇಷ್ಟ. ಹಾಗಾಗಿ ಆ ಎರಡನ್ನೂ ಸೇರಿಸಿ ಹೆಸರು ಇಟ್ಟದ್ದು ಕರೆಯುವುದು ಮಾತ್ರ ಭಾಸ್ಕರ ಅಂತ," ಎಂದು ಸಣ್ಣಗೆ ನಕ್ಕ.

"ಚೆನ್ನಾಗಿದೆ ನಿಮ್ಮ ಹೆಸರು."

"ನನಗೆ ಬಹುವಚನ ಕೊಡುವುದು ಬೇಡ; ನಾನು ನಿಮಗಿಂತ ಚಿಕ್ಕವನು. ನನ್ನ ಊರು ಅರವಳ್ಳಿ. ಇಲ್ಲಿ ರೂಮು ಮಾಡಿಕೊಂಡಿದ್ದೇನೆ. ಇದೇ ನನ್ನ ಉದ್ಯೋಗ," ಎಂದು ಕ್ಯಾಮರದತ್ತ ಕೈ ತೋರಿಸಿದ.

"ಒಳ್ಳೆಯದು. ನಾನು ಕೆರೆಗದ್ದೆಯವನು. ಈಗ ಇರುವುದು ಮಾತ್ರ ಮಗಳ ಮನೆಯಲ್ಲಿ. ಅವಳೊಬ್ಬಳೇ ಮಗಳು. ಹೆಂಡತಿ ಸೀತಾ ತೀರಿಹೋಗಿ ಮೂವತ್ತೈದು ವರ್ಷಗಳೇ ಕಳೆಯಿತು."

ಭಾಸ್ಕರ ಜೋಯಿಸರ ಮಾತನ್ನು ಅಲ್ಲಿಗೆ ತಡೆದು, "ಇನ್ನೊಂದು ಮದುವೆಯಾಗಲಿಲ್ಲವಾ ಜೋಯಿಸರೆ!" ಎಂದ.

"ಇಲ್ಲ, ನನ್ನ ಬಂಧುಗಳೆಲ್ಲ ತುಂಬಾ ಒತ್ತಾಯಿಸಿದರು. ಆದರೆ ನನ್ನ ಮಗಳ ಭವಿಷ್ಯದ ದೃಷ್ಟಿಯಿಂದ ಇನ್ನೊಂದು ಮದುವೆಯಾಗಲಿಲ್ಲ. ನನ್ನ ಸೀತೆಯೇ ಮಗಳ ರೂಪದಲ್ಲಿದ್ದಾಳೆ. ನನ್ನ ಸರ್ವಸ್ವವೂ ಅವಳೇ. ಅವಳಿಗೆ ತಕ್ಕ ಹುಡುಗನನ್ನೇ ಹುಡುಕಿ ಮದುವೆ ಮಾಡಿದೆ. ಅಳಿಯನೂ ದೇವರಂಥವನೇ. ಮಾಸ್ತರನಾಗಿದ್ದ ನಾನು ನಿವೃತ್ತಿಯ ಬಳಿಕ ಮಗಳ ಹಟಕ್ಕೆ ಮಣಿದು ಮಗಳ ಮನೆಗೆ ಬಂದು ಉಳಿದುಕೊಂಡಿದ್ದೇನೆ. ಸಕ್ಕರೆಕಾಯಿಲೆಯೊಂದು ನನ್ನ ದೇಹಕ್ಕಿರುವ ನಿರ್ಬಂಧ," ಎಂದು ತನ್ನೆಲ್ಲ ವಿವರಗಳನ್ನು ಭಾಸ್ಕರನಲ್ಲಿ ಎಷ್ಟೋ ದಿನದಿಂದ ಪರಿಚಯವಿದ್ದ ಬಂಧುವಿನಂತೆ ಹೇಳಿಕೊಂಡರು.

ಭಾಸ್ಕರನಿಗೂ ಈಗ ಜೋಯಿಸರು ತೀರ ಹತ್ತಿರದವರಂತೆ ಕಂಡುಬಂದರು.

"ನಿಮಗೆ ಏಕತಾನತೆ ಕಾಡುವುದಿಲ್ಲವೇ?"

"ಇಲ್ಲ, ಸೀತೆಯ ನೆನಪಾದಾಗಲೆಲ್ಲ ಮನಸ್ಸಿಗೆ ಬೇಸರವಾಗುತ್ತದೆ. ನಿವೃತ್ತಿಯಾಗುವತನಕ ಹಾಗೇನೂ ಅನಿಸಲಿಲ್ಲ. ಈಗೀಗ ಒಮ್ಮೊಮ್ಮೆ ಏಕತಾನತೆ ಕಾಡುತ್ತದೆ. ಆಗ ಈ ಫೋಟೋವನ್ನು ತೆಗೆದು ನೋಡುತ್ತೇನೆ. ನೋಡುತ್ತ ನೋಡುತ್ತ ಹಿಂದಕ್ಕೆ ಹೋಗಿ ಸೀತೆಯೊಂದಿಗೆ ಕಳೆದ ಸಂತಸದ ಕ್ಷಣಗಳನ್ನು ನೆನಪಿಸಿಕೊಂಡು ಆನಂದ ಪಡುತ್ತೇನೆ. ಮೊನ್ನೆ ಈ ಫೋಟೋವನ್ನು ತೆಗೆದು ನೋಡುತ್ತಿರುವಾಗ ನಾನಿದ್ದ ಭಾಗ ಹಾಳಾಗಿರುವುದು ನನ್ನ ಮನಸ್ಸಿಗೆ ತುಂಬಾ ನೋವುಂಟು ಮಾಡಿತು. ಹಾಗಾಗಿ ಸರಿಮಾಡಿಸಬೇಕೆಂದುಕೊಂಡು ಹೊರಟಿದ್ದು."

ಜೋಯಿಸರ ಒಳ್ಳೆಯತನಕ್ಕೆ ಭಾಸ್ಕರ ಮಾರುಹೋದ. "ನೀವೇನು ಚಿಂತೆ ಮಾಡಬೇಡಿ,